# ೯ನೇ ತರಗತಿ ಸಿರಿ ಕನ್ನಡ-ನೈದಾನಿಕ ಪರೀಕ್ಷೆ-2016

| ವಿದ್ಯಾರ್ಥಿ ಹೆಸರು | | ಹಾಜರಾತಿ ಸಂಖ್ಯೆ | |
|---|---|---|---|

**I. ಶಿಕ್ಷಕರು ಹೇಳುವ ವಾಕ್ಯಗಳನ್ನು ಬರೆಯಿರಿ (ಉಕ್ತಲೇಖನ)**

**(ಶಿಕ್ಷಕರು ಹೇಳುವ ಐದು ವಾಕ್ಯಗಳಲ್ಲಿ ಮೂರು ವಾಕ್ಯಗಳನ್ನು ಸರಿ ಬರೆದರೆ "ಎ" ಶ್ರೇಣಿ ನೀಡುವುದು)**

| |
|---|
| |
| |
| |
| |
| |

**II. ಕೆಳಗಿನ ಗದ್ಯಭಾಗವನ್ನು ಓದಿ,ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ**

ಭೂಮಂಡಲದಲ್ಲಿ ಪ್ರತಿಯೊಂದು ಪ್ರಾಣಿಯೂ ತನಗಿರುವ ಸಂತಾನ ಸಾಮರ್ಥ್ಯವನ್ನು ಬಳಸಿದ್ದರೆ, ಇಲ್ಲವೇ ಅವುಗಳ ಮರಿಗಳೆಲ್ಲಾ ಬದುಕಿ ಇರುವಂತಾಗಿದ್ದರೆ, ಯಾವ ಪ್ರಾಣಿಗೂ ಹೊಟ್ಟೆತುಂಬ ಆಹಾರ ಸಿಗುತ್ತಿರಲಿಲ್ಲ. ಐದು ವರ್ಷಕ್ಕೊಮ್ಮೆ ಒಂದು ಮರಿಗೆ ಜನ್ಮಕೊಡುವ ಆನೆ, ಸಂತತಿ ನಿರ್ಮಿತಿಯಲ್ಲಿ ಅತಿ ಮಂದಗತಿಯದು ಎಂದು ಪರಿಗಣಿಸಿದೆ. ಹೀಗಿದ್ದೂರು ಆನೆಯ ಎಲ್ಲ ಮರಿಗಳೂ ಸರಿಯಾಗಿ ಬೆಳೆದು ಐದು ವರ್ಷಕ್ಕೆ ಒಂದು ಮರಿಗೆ ಜನ್ಮಕೊಡುತ್ತಾ ಹೋದರೆ ಒಂದೇ ಶತಮಾನದಲ್ಲಿ ಜಗತ್ತೆಲ್ಲಾ ಆನೆಮಯವಾಗಿ ಹೋಗುತ್ತಿತ್ತು. ಪ್ರತಿಯೊಂದು ಪ್ರಾಣಿಯೂ ತನ್ನ ವಂಶಜರೂ ಬಾಳಬೇಕೆಂದು ಹೆಚ್ಚೆಚ್ಚು ಪ್ರಮಾಣದಲ್ಲಿ ಸಂತಾನ ಅಭಿವೃದ್ಧಿ ಮಾಡುತ್ತದೆ. ಇದರಿಂದಾಗಿ ಆಹಾರ ಆಚ್ಛಾದನಗಳಿಗಾಗಿ ಸ್ಪರ್ಧೆ ಏರ್ಪಡುವುದು.

**ಪ್ರಶ್ನೆಗಳು : (ಕನಿಷ್ಠ ಎರಡು ಪ್ರಶ್ನೆಗಳಿಗೆ ಸರಿ ಉತ್ತರಿಸಿದ್ದರೆ "ಎ" ಶ್ರೇಣಿ ನೀಡುವುದು)**

| |
|---|
| 1. ಪ್ರಾಣಿಗಳಲ್ಲಿ ಯಾವುದಕ್ಕಾಗಿ ಸ್ಪರ್ಧೆ ಏರ್ಪಡುತ್ತದೆ ? |
| |
| 2. ಪ್ರಾಣಿಗಳಿಗೆ ಯಾಕೆ ಹೊಟ್ಟೆತುಂಬ ಆಹಾರ ಸಿಗುತ್ತಿರಲಿಲ್ಲ. ? |
| |
| 3. ಯಾವ ಪ್ರಾಣಿ ತನ್ನ ಸಂತತಿ ನಿರ್ಮಿತಿಯಲ್ಲಿ ಅತಿ ಮಂದಗತಿಯದು ? |
| |

**III. ಕೆಳಗಿನ ಪದ್ಯಭಾಗಗಳನ್ನು ಓದಿ, ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

1) ಹಣ್ಣನೀವ ಕಾಯನೀವ ಪರಿಪರಿಯ ಮರಂಗಳೊ,
ಪತ್ರಮೀವ ಪುಷ್ಪಮೀವ ಲತೆಯ ತರತರಂಗಳೊ,
ತೆನೆಯ ಕೆನೆಯ ಗಾಳಿಯೊ,
ಖಗಮೃಗೋರಗಾಳಿಯೊ,
ನದಿ ನಗರ ನಗಾಳಿಯೊ!
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ?

2) ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ
ತಣ್ಣೆಳಲ ತಂಪಿನಲಿ ತಂಗಿರುವೆನು ;
ಜೀವನದನಂತ ದುರ್ಭರ ಬವಣೆ ನೋವುಗಳ
ಕಾವುಗಳ ಮೌನದಲಿ ನುಂಗಿರುವೆನು
ಗೆಳೆತನವೆ ಇಹಲೋಕಕಿರುವ ಅಮೃತ
ಅದನುಳಿದರೇನಿಹುದು–ಜೀವನ್ಮೃತ !

**ಪ್ರಶ್ನೆಗಳು (ಕನಿಷ್ಠ ಎರಡು ಪ್ರಶ್ನೆಗಳಿಗೆ ಸರಿ ಉತ್ತರಿಸಿದ್ದರೆ "ಎ" ಶ್ರೇಣಿ ನೀಡುವುದು)**

| |
|---|
| 1) ಲತೆ ಯಾವುದನೆಲ್ಲಾ ನೀಡುತ್ತದೆ ? |
| |
| 2) ಇಹಲೋಕಕ್ಕಿರುವ ಅಮೃತ ಯಾವುದು ? |
| |
| 3) ಮರಗಳು ಏನನ್ನು ನೀಡುತ್ತವೆ ? |
| |

**IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಕನಿಷ್ಠ ಆರು ಪ್ರಶ್ನೆಗಳಿಗೆ ಸರಿ ಉತ್ತರಿಸಿದ್ದರೆ "ಎ" ಶ್ರೇಣಿ ನೀಡುವುದು)**

1) ಕನ್ನಡ ವರ್ಣಮಾಲೆಯ ಸ್ವರ ಅಕ್ಷರಗಳನ್ನು ಬರೆಯಿರಿ

2) ರಥ , ಪಟ, ಹಣ – ಇವುಗಳಲ್ಲಿ ಮಹಾಪ್ರಾಣ ಇರುವ ಪದ ಬರೆಯಿರಿ

3) ತಲೆಯೆತ್ತಿ – ಈ ಪದವನ್ನು ಬಿಡಿಸಿ ಬರೆಯಿರಿ

4) ದಿವಾನರನ್ನು – ಈ ಪದದಲ್ಲಿನ ವಿಭಕ್ತಿ ಹೆಸರು ತಿಳಿಸಿ

5) ತೆಂಕಣ , ಶಂಕರ , ಬಿಳುಪು–ಇವುಗಳಲ್ಲಿ ದಿಕ್ಕು ಸೂಚಿಸುವ ಪದ ಯಾವುದು ?

6) ಅಣ್ಣ – ಇದರ ಬಹುವಚನ ರೂಪ ಬರೆಯಿರಿ.

7) ಕಾವ್ಯ : ಕಬ್ಬ :: ಆಶ್ಚರ್ಯ : ____________

8) ಆನೆ ಪದದ ಸಮನಾರ್ಥಕ ಪದ ಬರೆಯಿರಿ

9) ಗಾವಿಲ ಪದದ ಅರ್ಥಬರೆಯಿರಿ

10) ಕಂದ್ಯ ಪದ್ಯದಲ್ಲಿ ಎಷ್ಟು ಸಾಲುಗಳಿರುತ್ತವೆ ?

*****